# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
## ಮುಕ್ತಗಂಗೋತ್ರಿ, ಮೈಸೂರು – 570006

**ದಿನಾಂಕ: 07.03.2024** ರಂದು **ಅಪರಾಹ್ನ 3.30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಭವನ ಕಟ್ಟಡದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ **177ನೇ** ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ಲಕ್ಷ್ಮಿ .ಎನ್**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು – 570009 |
| **ಡಾ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು ಗೂಂಜ್,<br>ಕಲಬುರಗಿ – 585104<br>**ಆನ್‌ಲೈನ್ ಮುಖಾಂತರ ಹಾಜರಿರುತ್ತಾರೆ.** | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ರವರ ಪರವಾಗಿ<br>**ಶ್ರೀಮತಿ. ಉಮಾ .ಕೆ**<br>ಜಂಟಿ ಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001<br>**ಆನ್‌ಲೈನ್ ಮುಖಾಂತರ ಹಾಜರಿರುತ್ತಾರೆ.** |
| **ಅನುಪಸ್ಥಿತರು** | |
| ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 | |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 177ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 177ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

**ಕುಲಪತಿಗಳು** **ಕುಲಸಚಿವರು**

**ವಿಷಯ ಸಂಖ್ಯೆ: 177.01 (ಅ)**

**ವಿಷಯ: ದಿನಾಂಕ: 03.03.2024ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 60ನೇ ವಿಶೇಷ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.**

– * –

**ತೀರ್ಮಾನ:**

**ದಿನಾಂಕ: 03.03.2024ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 60ನೇ ವಿಶೇಷ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

*****

**ವಿಷಯ ಸಂಖ್ಯೆ: 177.01 (ಆ)**

**ವಿಷಯ: ದಿನಾಂಕ: 03.03.2024ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 60ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.**

– * –

**ತೀರ್ಮಾನ:**

**ದಿನಾಂಕ: 03.03.2024ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 60ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 177.02**

**ವಿಷಯ : ಡಾ. ನಟರಾಜ ಅಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು, ಇವರು ಸಲ್ಲಿಸಿದ ವೈದ್ಯಕೀಯ ವೆಚ್ಚ ಮರುಭರಿಕೆ ಹುಂಡಿ ಪಾವತಿಸುವ ಕುರಿತು.**

– * –

ಡಾ. ನಟರಾಜ ಅಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು, ಇವರ ತಾಯಿಯವರಾದ ಶ್ರೀಮತಿ ಧನಲಕ್ಷ್ಮೀ, ಇವರಿಗೆ ಹೃದಯ (Angioplastry) ಸಂಬಂಧ ಚಿಕಿತ್ಸೆಯನ್ನು ನಾರಾಯಣ ಮಲ್ಟಿ ಸ್ಪೇಷಲಿಟಿ ಆಸ್ಪತ್ರೆ, ಮೈಸೂರು, ಇಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಒಟ್ಟು ಮೊತ್ತ ರೂ. 4,00,000/– (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವಂತೆ ಮನವಿ ಮಾಡಿಕೊಂಡಿರುತ್ತಾರೆ.

ಸದರಿಯವರು ಸಲ್ಲಿಸಿದ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿದ ನಂತರ ಪಾವತಿಸಬೇಕಾಗಿರುವ ಹುಂಡಿಯ ಒಟ್ಟು ಮೊತ್ತ ರೂ. 2,34,956/– (ಎರಡು ಲಕ್ಷದ ಮೂವತ್ತನಾಲ್ಕು ಸಾವಿರದ ಒಂಬೈನ್ನೂರ ಐವತ್ತಾರು ರೂಪಾಯಿಗಳು ಮಾತ್ರ)ಗಳಾಗಿರುತ್ತದೆ.

ಮುಂದುವರೆದು, ವಿ.ವಿ. ನಿಲಯದ ಪರಿನಿಯಮ 23(3)ರಲ್ಲಿ ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು ರೂ. 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ. (ಪ್ರತಿ ಲಗತ್ತಿಸಿದೆ).

ಕುಲಪತಿಗಳು | ಕುಲಸಚಿವರು

ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿಯವರು ಸಲ್ಲಿಸಿರುವ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಮೊತ್ತ ರೂ. 2,34,956/- (ಎರಡು ಲಕ್ಷದ ಮೂವತ್ತನಾಲ್ಕು ಸಾವಿರದ ಓಂಬೈನ್ನೂರ ಐವತ್ತಾರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಡಾ. ನಟರಾಜ ಅಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು, ಇವರ ತಾಯಿಯವರಾದ ಶ್ರೀಮತಿ ಧನಲಕ್ಷ್ಮೀ, ಇವರಿಗೆ ಹೃದಯ (Angioplastry) ಸಂಬಂಧ ಚಿಕಿತ್ಸೆಯನ್ನು ನಾರಾಯಣ ಮಲ್ಟಿ ಸ್ಪೇಷಲಿಟಿ ಆಸ್ಪತ್ರೆ, ಮೈಸೂರು, ಇಲ್ಲಿ ಚಿಕಿತ್ಸೆ ಪಡೆದಿದ್ದು, ಸದರಿಯವರು ಚಿಕಿತ್ಸೆಯ ಸಂಬಂಧ ಸಲ್ಲಿಸಿದ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿಧ ನಂತರ ಪಾವತಿಸಬೇಕಾಗಿರುವ ಹುಂಡಿಯ ಒಟ್ಟು ಮೊತ್ತ ರೂ. 2,34,956/- (ಎರಡು ಲಕ್ಷದ ಮೂವತ್ತನಾಲ್ಕು ಸಾವಿರದ ಓಂಬೈನ್ನೂರ ಐವತ್ತಾರು ರೂಪಾಯಿಗಳು ಮಾತ್ರ)ಗಳಾಗಿರುತ್ತದೆಂದು ತಿಳಿಸಿರುತ್ತಾರೆ ಕುಲಸಚಿವರು ಸಭೆಗೆ ವಿವರಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಡಾ. ನಟರಾಜ ಅಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಇವರ ತಾಯಿಯವರಾದ ಶ್ರೀಮತಿ ಧನಲಕ್ಷ್ಮೀ, ಇವರಿಗೆ ಹೃದಯ (Angioplastry) ಸಂಬಂಧ ಚಿಕಿತ್ಸೆಯನ್ನು ನಾರಾಯಣ ಮಲ್ಟಿ ಸ್ಪೇಷಲಿಟಿ ಆಸ್ಪತ್ರೆ, ಮೈಸೂರು, ಇಲ್ಲಿನ ಚಿಕಿತ್ಸೆಯ ಸಂಬಂಧ ಸಲ್ಲಿಸಿದ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿದ ನಂತರ ಪಾವತಿಸಬೇಕಾಗಿರುವ ಹುಂಡಿಯ ಒಟ್ಟು ಮೊತ್ತ ರೂ.2,34,956/- (ಎರಡು ಲಕ್ಷದ ಮೂವತ್ತನಾಲ್ಕು ಸಾವಿರದ ಓಂಬೈನ್ನೂರ ಐವತ್ತಾರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**<u>ವಿಷಯ ಸಂಖ್ಯೆ: 177.03</u>**

**<u>ವಿಷಯ:</u> ಹಣಕಾಸು ಸಮಿತಿಯ 88ನೇ ಸಭೆಯ ನಡಾವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.**

– * –

ದಿನಾಂಕ: 07.03.2024ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 88ನೇ ಸಭೆಯ ನಡಾವಳಿಯನ್ನು ವ್ಯವಸ್ಥಾಪನಾ ಮಂಡಳಿಯ 177ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ಕುಲಸಚಿವರು ಮಾತನಾಡಿ ದಿನಾಂಕ: 07.03.2024ರ ಪೂರ್ವಾಹ್ನ ಹಣಕಾಸು ಸಮಿತಿ ಸಭೆಯು ಜರುಗಿದ್ದು, ಸದರಿ ಸಭೆಗೆ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿಗಳು ಸಹ ಹಾಜರಾಗಿ ಕೆಲವು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆಂದು ಸಭೆಗೆ ವಿವರಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 07.03.2024ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 88ನೇ ಸಭೆಯ ನಡಾವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯು ಅನುಮೋದಿಸಿತು.**

#####

ಕುಲಪತಿಗಳು  ಕುಲಸಚಿವರು

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:

**1. ವಿಷಯ :** ವಿಶ್ವವಿದ್ಯಾನಿಲಯದಲ್ಲಿ KSOU(Creation of Posts & Absorption of Temporary Teachers) – Statutes2012ದ ಮೂಲಕ ವಿಲೀನಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಯು.ಜಿ.ಸಿ ನಿಯಮಾವಳಿಗಳನ್ವಯ ರಚಿಸಿಕೊಂಡಿರುವ ಪರಿನಿಯಮದಡಿ ವೃತ್ತಿ ಪದೋನ್ನತಿ ಯೋಜನೆ (CAS) Academic Level 10 to 11 ಹಂತದ ಪದೋನ್ನತಿ ನೀಡುವ ಬಗೆಗೆ.

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ ನಿಯಮಗಳನ್ವಯ ಹಾಗೂ ವಿ.ವಿ.ಯು ರಚಿಸಿಕೊಂಡಿರುವ ಪರಿನಿಯಮದನ್ವಯ ವಿವಿಧ ಹಂತಗಳಿಗೆ ಪದೋನ್ನತಿ ನೀಡುವ ಸಂಬಂಧ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, KSOU (Creation of Posts & Absorption of Temporary Teachers) – Statutes 2012ದ ಮೂಲಕ ವಿಲೀನಗೊಂಡು ಕರ್ತವ್ಯ ನಿರ್ವಹಿಸುತ್ತಿರುವ 21 ಸಹಾಯಕ ಪ್ರಾಧ್ಯಾಪಕರುಗಳು ಮುಂದಿನ ಹಂತದ ಪದೋನ್ನತಿಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಜಸ್ಟೀಸ್ ಡಾ. ಕೆ. ಭಕ್ತವತ್ಸಲ ರವರ ವರದಿ ಹಾಗೂ ಆಡಿಟ್ ವರದಿಯನ್ವಯ ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ನೇಮಕಾತಿಯನ್ನು ರದ್ದುಗೊಳಿಸಬಾರದೇಕೇ? ಎಂಬುದರ ಕುರಿತು ಲಿಖಿತ ಹೇಳಿಕೆ ಸಲ್ಲಿಸುವಂತೆ ದಿನಾಂಕ:06.02.2012ರಂದು 'ಷೋಕಾಸ್ ನೋಟಿಸ್' ಜಾರಿಗೊಳಿಸಲಾಗಿತ್ತು

ಸದರಿಯವರುಗಳಿಗೆ ಜಾರಿಗೊಳಿಸಿದ್ದ ದಿನಾಂಕ:06.02.2019ರ ಷೋಕಾಸ್ ನೋಟೀಸ್‌ನ ನಂತರ ಎಲ್ಲಾ ಪ್ರಕ್ರಿಯೆಗಳನ್ನು ರದ್ದುಗೊಳಿಸಲು, ಅವರುಗಳ ನೇಮಕಾತಿಯು ನಿಯಮಬದ್ಧ ಹಾಗೂ ಅವರುಗಳು ಯು.ಜಿ.ಸಿ ನಿಯಮಾವಳಿನ್ವಯ ಅರ್ಹತೆವುಳ್ಳವರೆಂದು ಪರಿಗಣಿಸಲು, ಅವರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸುಗಳ ಸೌಲಭ್ಯಗಳನ್ನು ವಿಸ್ತರಿಸಲು, 2018ನೇ ಸಾಲಿನಿಂದ ತಡೆ ಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿ, ಯು.ಜಿ.ಸಿ ನಿಯಮದನ್ವಯ ಪಿಹೆಚ್.ಡಿ/ ಎಂ.ಫಿಲ್/ಎಲ್ಎಲ್.ಎಂನ ವಿದ್ಯಾರ್ಹತೆಗೆ ಹೆಚ್ಚುವರಿ ವೇತನ ಬಡ್ತಿ ನೀಡಲು ನಿರ್ದೇಶಿಸುವಂತೆ ಕೋರಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪ್ರಕರಣ ದಾಖಲಿಸಿದ್ದು, ಈ ಸಂಬಂಧ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:09.09.2019ರಂದು "_Both parties maintain status quo…." ಎಂದು ಆದೇಶಿಸಿರುತ್ತದೆ ಮತ್ತು ದಿನಾಂಕ:23.09.2019ರಂದು".......List after Dasara Vacation 2019, I/O Extended….." ಎಂದು ಆದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿಯವರುಗಳಿಗೆ ವಿಶ್ವವಿದ್ಯಾನಿಲಯವು 7ನೇ ವೇತನ ಆಯೋಗದ ಶಿಫಾರಸ್ಸುಗಳ ಸೌಲಭ್ಯ, 2018ನೇ ಸಾಲಿನಿಂದ ವಾರ್ಷಿಕ ವೇತನ ಬಡ್ತಿ, ಯು.ಜಿ.ಸಿ ನಿಯಮದನ್ವಯ ಪಿಹೆಚ್.ಡಿ/ ಎಂ.ಫಿಲ್/ ಎಲ್.ಎಲ್.ಎಂ.ನ ವಿದ್ಯಾರ್ಹತೆಗೆ ಹೆಚ್ಚುವರಿ ವೇತನ ಬಡ್ತಿಗಳನ್ನು ಹಾಗೂ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿಯನ್ನು ತಡೆಹಿಡಿಯಲಾಗಿತ್ತು.

ಮುಂದುವರಿದು, 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವಿವಿಧ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧದಲ್ಲಿ ಕಾನೂನು ಅಭಿಪ್ರಾಯ ಪಡೆಯುವಂತೆ ಮಾನ್ಯ ಕುಲಪತಿಗಳು ದಿನಾಂಕ: 22.07.2022ರಂದು ಟಿಪ್ಪಣಿಯನ್ನು ನೀಡಿದ್ದು, ಸದರಿ ಟಿಪ್ಪಣಿಯನ್ವಯ 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವಿವಿಧ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧದಲ್ಲಿ ಕಾನೂನು ಅಭಿಪ್ರಾಯ

ಕುಲಪತಿಗಳು ಕುಲಸಚಿವರು

ನೀಡುವಂತೆ ಕೋರಿ ದಿನಾಂಕ: 22.07.2022ರಂದು ಶ್ರೀ ಪ್ರಸಾದ್ ಹಿರೇಮಠ್, ವಕೀಲರು, ಬೆಂಗಳೂರು, ಇವರಿಗೆ ಪತ್ರವನ್ನು ರವಾನಿಸಲಾಗಿದ್ದು, ಸದರಿಯವರು ದಿನಾಂಕ: 10.08.2022 ರಂದು ತಮ್ಮ ಕಾನೂನು ಅಭಿಪ್ರಾಯವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಸದರಿ ಕಾನೂನು ಅಭಿಪ್ರಾಯವನ್ನು ಪರಿಗಣಿಸಿ ಹಾಗೂ ಮಾನ್ಯ ಕುಲಪತಿಗಳ ಆದೇಶದನ್ವಯ 21ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವೇತನ, 7ನೇ ಪರಿಷ್ಕೃತ ವೇತನ ಹಾಗೂ ಇತರೆ ಭತ್ಯೆಗಳು ಹಾಗೂ ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿಗಳನ್ನು ಸಹಾಯಕ ಪ್ರಾಧ್ಯಾಪಕರುಗಳಿಂದ ಮುಚ್ಚಳಿಕೆಯನ್ನು ಬರೆಯಿಸಿಕೊಂಡು 2016ರಿಂದ ಜಾರಿಗೆ ಬಂದಂತೆ ಬಿಡುಗಡೆಗೊಳಿಸುವ ಸಂಬಂಧ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/587/2022-23, ದಿನಾಂಕ: 27.09.2022ರಂದು ಆದೇಶ ಹೊರಡಿಸಲಾಗಿರುತ್ತದೆ.

ವಿ.ವಿ. ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/ಪಿಹೆಚ್.ಡಿ/297/2021-22, ದಿನಾಂಕ: 13.10.2022 ಮತ್ತು 28.10.2022ರ ಆದೇಶದನ್ವಯ ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿಹೆಚ್.ಡಿ ಮತ್ತು ಎಂ.ಫಿಲ್ ಪದವಿ ಹೊಂದಿರುವ ಸಂಬಂಧ ನಾನ್ ಕಾಂಪೌಂಡೆಡ್ ಇಂಕ್ರಿಮೆಂಟ್‌ಅನ್ನು ಬಿಡುಗಡೆಗೊಳಿಸಲಾಗಿರುತ್ತದೆ. 21 ಸಹಾಯಕ ಪ್ರಾಧ್ಯಾಪಕರುಗಳಿಗೆ ಎಲ್ಲಾ ಆರ್ಥಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಪರಿನಿಯಮ KSOU(Creation of Posts & Absorption of Temporary Teachers) – Statutes 2012ದ ಮೂಲಕ ವಿಲೀನಗೊಂಡ ಅಧ್ಯಾಪಕರುಗಳು ವಿಶ್ವವಿದ್ಯಾನಿಲಯವು ನೀಡಿರುವ ಷೋಕಾಸ್ ನೋಟೀಸ್‌ಅನ್ನು ರದ್ದುಪಡಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಿಸಿದ್ದ W.P.No.36509-36527/2019ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯವು ತನ್ನ ದಿನಾಂಕ: 12.12.2023ರ ಆದೇಶದಲ್ಲಿ

" ….. the show-cause notices issued by the University on the premise that the absorption of the petitioners are irregular / illegal cannot be sustained and the same are quashed.

As a result of the show-cause notice, if the petitioners are deprived of any benefits, the same shall be restored and the petitioners shall be granted the benefits "ಎಂದು ಆದೇಶಿಸಿರುತ್ತದೆ.

ಮುಂದುವರಿದು, ಮೇಲ್ಕಂಡ ರಿಟ್ ಪ್ರಕರಣದ 19ನೇ ಅರ್ಜಿದಾರರಾದ ಡಾ. ಎ.ಎಸ್. ಮಧುರ ರವರ ಹೆಸರು ರಿಟ್ ಆದೇಶದ ಪ್ರತಿಯಲ್ಲಿ ಇರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯವು ನೀಡಿರುವ ಷೋಕಾಸ್ ನೋಟೀಸ್ ಅನ್ನು ಪ್ರಶ್ನಿಸಿ ಡಾ. ಎಸ್. ರಮ್ಯ ಮತ್ತು ಡಾ. ಜೆ.ಎಲ್. ಬನಶಂಕರಿ ಇವರು ಪ್ರತ್ಯೇಕವಾಗಿ W.P.No.51877 & 49437/2019ರ ಪ್ರಕರಣ ದಾಖಲಿಸಿದ್ದು, ಪ್ರಸ್ತುತ ಸದರಿ ಪ್ರಕಣಗಳು ಬಾಕಿ ಇರುತ್ತವೆ.

ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿಗೆ ಕ್ರಮವಹಿಸಲಾಗಿರುತ್ತದೆ. ಸದರಿ ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು ಪ್ರಾಥಮಿಕ ಹಂತವಾಗಿ ಪರಿಶೀಲಕರಿಂದ ಪರಿಶೀಲಿಸಲಾಗಿರುತ್ತದೆ. ಪರಿಶೀಲಕರು ಅರ್ಜಿಗಳನ್ನು ಪರಿಶೀಲಿಸಿ Score Card ಅನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಜಿ ಸಲ್ಲಿಸಿರುವ ಸಹಾಯಕ ಪ್ರಾಧ್ಯಾಪಕರುಗಳ ವಿವರ ಈ ಕೆಳಗಿನಂತಿದೆ:

ಕುಲಪತಿಗಳು　　　　　　　　　　　　ಕುಲಸಚಿವರು

| ಕ್ರ.ಸಂ | ಸಹಾಯಕ ಪ್ರಾಧ್ಯಾಪಕ ಹೆಸರು | ವಿಷಯ |
|---|---|---|
| 1 | ಡಾ. ಸಿ. ಅನಿತಾ | ಆಹಾರ ಮತ್ತು ಪೌಷ್ಟಿಕತೆ |
| 2 | ಡಾ. ಟಿ.ಎಸ್. ಹರ್ಷ | ಪರಿಸರ ವಿಜ್ಞಾನ |
| 3 | ಡಾ. ಪಿ. ಮಂಜುನಾಥ್ | ಮನೋವಿಜ್ಞಾನ |
| 4 | ಡಾ. ಡಿ.ಎಂ. ಮಹೇಶ್ | ಗಣಕವಿಜ್ಞಾನ |
| 5 | ಡಾ. ನಂದಿನಿ ಹೆಚ್.ಎಂ | ಮಾಹಿತಿ ತಂತ್ರಜ್ಞಾನ |
| 6 | ಡಾ. ಸುಮತಿ ರಾಮಕೃಷ್ಣಗೌಡ | ಗಣಕವಿಜ್ಞಾನ |
| 7 | ಡಾ. ಡಿ.ಎನ್. ಭವ್ಯ | ಗಣಕವಿಜ್ಞಾನ |
| 8 | ಡಾ. ವೈ.ಪಿ. ಚಂದ್ರಶೇಖರ್ | ಭೂಗೋಳಶಾಸ್ತ್ರ |
| 9 | ಡಾ. ಕೆ.ಎಸ್. ವಿರೇಂದ್ರಕುಮಾರ್ | ಅರ್ಥಶಾಸ್ತ್ರ |
| 10 | ಡಾ. ಜೆ.ಎಲ್. ಬನಶಂಕರಿ | ಅರ್ಥಶಾಸ್ತ್ರ |
| 11 | ಡಾ. ಜಿ.ವಿ. ನವೀನ್ | ವಾಣಿಜ್ಯಶಾಸ್ತ್ರ |
| 12 | ಡಾ. ಎಸ್. ಶ್ರೀಕಾಂತ್ | ಇಂಗ್ಲೀಷ್ |
| 13 | ಡಾ. ಎಸ್. ಎಸ್. ಜಾಹ್ನವಿ | ಕಾನೂನು, ರಾಜ್ಯಶಾಸ್ತ್ರ |
| 14 | ಡಾ. ಎಸ್. ರಮ್ಯ | ಸಮಾಜಶಾಸ್ತ್ರ |
| 15 | ಡಾ. ಎ. ಎಸ್. ಮಧುರ | ಇಂಗ್ಲೀಷ್ |
| 16 | ಶ್ರೀ ಸಿರಾಜ್ ಭಾಷಾ | ನಿರ್ವಹಣಶಾಸ್ತ್ರ |
| 17 | ಡಾ. ಎನ್.ಸಿ. ಸುಜಾತ | ಇತಿಹಾಸ |
| 18 | ಡಾ. ಜ್ಯೋತಿಶಂಕರ್ | ಕನ್ನಡ |
| 19 | ಡಾ. ಸಿ. ರಾಮೇಗೌಡ | ಇತಿಹಾಸ |
| 20 | ಡಾ. ಕೃಷ್ಣಪ್ಪ ನಿಂಬಕ್ಕನವರ್ | ರಾಜ್ಯಶಾಸ್ತ್ರ |
| 21 | ಡಾ. ಶೈಲೇಶ್ ರಾಜ್ ಅರಸ್ | ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ |

ಮೇಲ್ಕಂಡ ಸಹಾಯಕ ಪ್ರಾಧ್ಯಾಪಕರುಗಳ ಪೈಕಿ 18 ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿಯ ಸಂಬಂಧ ಮುಂದಿನ ಕ್ರಮವಹಿಸಲಾಗಿರುತ್ತದೆ. ಡಾ. ಎ.ಎಸ್. ಮಧುರ, ಡಾ. ಜೆ.ಎಲ್. ಬನಶಂಕರಿ ಹಾಗೂ ಡಾ. ಎಸ್. ರಮ್ಯಾ ಇವರುಗಳಿಗೆ ಮಾನ್ಯ ಉಚ್ಚನ್ಯಾಯಾಲಯದಿಂದ ಯಾವುದೇ ಆದೇಶವಾಗಿಲ್ಲದ ಹಿನ್ನೆಲೆಯಲ್ಲಿ ಪದೋನ್ನತಿ ಸಂಬಂಧ ಯಾವುದೇ ಕ್ರಮವಹಿಸಿರುವುದಿಲ್ಲ.

ಯು.ಜಿ.ಸಿ. ನಿಯಮಾವಳಿ ಪ್ರಕಾರ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿ ನೀಡುವ ಸಂಬಂಧ Screening-cum-Evaluation Committeeಯನ್ನು ರಚಿಸಿ, ಸದರಿ ಸಭೆಯ ಶಿಫಾರಸ್ಸಿನನ್ವಯ ಮುಂದಿನ ಕ್ರಮವಹಿಸಬೇಕಾಗಿರುತ್ತದೆ. ವೃತ್ತಿ ಪದೋನ್ನತಿ ಯೋಜನೆಯಡಿ 18 ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿಯ ಮುಂದಿನ ಕ್ರಮವಹಿಸಲು ಡಾ. ಎಸ್. ನಿರಂಜನ್ ರಾಜ್, ನಿರ್ದೇಶಕರು, CIQA, ಕರಾಮುವಿ, ಇವರು ಪದೋನ್ನತಿಯ ಸಂಯೋಜನಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದು, ಸದರಿಯವರು ಪದೋನ್ನತಿಯ ಎಲ್ಲಾ ಕ್ರಮಗಳನ್ನು ನಿರ್ವಹಿಸಿರುತ್ತಾರೆ.

Academic Level: 10 to 11 ಹಂತಕ್ಕೆ ಪದೋನ್ನತಿ ನೀಡುವ ಸಂಬಂಧ Screening-cum-Evaluation Committee ಯನ್ನು ರಚಿಸಿ, ಸದರಿ ಸಮಿತಿಯ ಶಿಫಾರಿಸ್ಸಿನ ಮೇರೆಗೆ ಮುಂದಿನ ಕ್ರಮವಹಿಸಬೇಕಾಗಿರುತ್ತದೆ. ಮಾನ್ಯ ಕುಲಪತಿಗಳು ಗುರುತಿಸಿ ಸೂಚಿಸಿರುವ ಡೀನ್, ವಿಭಾಗದ ಮುಖ್ಯಸ್ಥರುಗಳು ಹಾಗೂ ವಿಷಯತಜ್ಞರುಗಳನ್ನೊಳಗೊಂಡಂತೆ Academic Level : 10 to 11 ಹಂತಕ್ಕೆ ಪದೋನ್ನತಿ ನೀಡುವ ಸಂಬಂಧ Screening-cum-Evaluation Committeeಯನ್ನು ರಚಿಸಿ

ಕುಲಪತಿಗಳು

ಕುಲಸಚಿವರು

ದಿನಾಂಕ: 23.02.2024ರಂದು ಅಧಿಸೂಚನೆ ಹಾಗೂ ದಿನಾಂಕ: 26.02.2024ರಂದು ವಿಷಯವಾರು ತಜ್ಞರುಗಳನ್ನೊಳಗೊಂಡಂತೆ Screening-cum-Evaluation Committee ಯನ್ನು ರಚಿಸಿ ಪ್ರತ್ಯೇಕ ಆದೇಶ ಹೊರಡಿಸಲಾಗಿರುತ್ತದೆ.

ನಾಮನಿರ್ದೇಶನ ಮಾಡಲಾದ ತಜ್ಞರುಗಳ ಒಪ್ಪಿಗೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, Academic Level: 10 to 11 ಹಂತಕ್ಕೆ ಪದೋನ್ನತಿ ನೀಡುವ ಸಂಬಂಧ Screening-cum-Evaluation Committee ಯ ಸಭೆಗಳನ್ನು ದಿನಾಂಕ: 27.02.2024 ಮತ್ತು 29.02.2024ರಂದು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಯುಜಿಸಿ / ಪರಿನಿಯಮದ ಪ್ರಕಾರ, ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು ಸಮಿತಿಯ ವಿಷಯ ತಜ್ಞರುಗಳು ಮತ್ತೊಮ್ಮೆ ಪರಿಶೀಲಿಸಿ ಆಯಾ ವಿಷಯವಾರು ಅಂಕಗಳನ್ನು ನೀಡಿ, ಪದೋನ್ನತಿಯ ಅರ್ಹತಾ ದಿನಾಂಕವನ್ನು ನಿಗದಿಪಡಿಸಿ ಸಭೆಯ ನಡಾವಳಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಕುಲಸಚಿವರಿಗೆ ಸಲ್ಲಿಸಿರುತ್ತಾರೆ. Screening-cum-Evaluation Committeeಯು ಸಲ್ಲಿಸಿರುವ ನಡವಳಿಯನ್ನು ತೆರೆದು, ಸದರಿ ಸಮಿತಿಯು ನಿಗದಿಪಡಿಸಿರುವ ಅರ್ಹತಾ ದಿನಾಂಕದಿಂದ ಜಾರಿಗೆ ಬಂದಂತೆ 18 ಸಹಾಯಕ ಪ್ರಾಧ್ಯಾಪಕರುಗಳಿಗೆ ಮುಂದಿನ ಹಂತದ ಪದೋನ್ನತಿ ನೀಡಲು ಕ್ರಮವಹಿಸಬೇಕಾಗಿರುತ್ತದೆ. Screening-cum-Evaluation Committee ಯ ವಿಷಯವಾರು ಸಭೆಗಳು ನಡೆದ ವಿವರ ಈ ಕೆಳಗಿನಂತಿದೆ:

| ಕ್ರ.ಸಂ. | ದಿನಾಂಕ | ವಿಷಯ | ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 01 | 27.02.2024 | ಮನೋವಿಜ್ಞಾನ | 01 |
| 02 | | ಪರಿಸರ ವಿಜ್ಞಾನ | 01 |
| 03 | | ಅಹಾರ ಮತ್ತು ಪೌಷ್ಟಿಕತೆ | 01 |
| 04 | | ಭೂಗೋಳಶಾಸ್ತ್ರ | 01 |
| 05 | | ಗಣಕವಿಜ್ಞಾನ | 03 |
| 06 | | ಮಾಹಿತಿ ತಂತ್ರಜ್ಞಾನ | 01 |
| 01 | 29.02.2024 | ಕನ್ನಡ | 01 |
| 02 | | ಇಂಗ್ಲೀಷ್ | 01 |
| 03 | | ಇತಿಹಾಸ | 02 |
| 04 | | ರಾಜ್ಯಶಾಸ್ತ್ರ | 02 |
| 05 | | ಅರ್ಥಶಾಸ್ತ್ರ | 01 |
| 06 | | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | 01 |
| 07 | | ನಿರ್ವಹಣಾಶಾಸ್ತ್ರ | 01 |
| 08 | | ವಾಣಿಜ್ಯಶಾಸ್ತ್ರ | 01 |
| | | ಒಟ್ಟು | **18** |

Screening-cum-Evaluation Committeeಯ ಶಿಫಾರಸ್ಸಿನ ಮೇರೆಗೆ ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿ Academic Level : 10 to 11 ಹಂತಕ್ಕೆ ಪದೋನ್ನತಿ ನೀಡುವ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, Screening-cum-Evaluation Committee ಯ ಶಿಫಾರಸ್ಸಿನ ಮೇರೆಗೆ ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿ Academic Level : 10 to 11 ಹಂತಕ್ಕೆ ಯು.ಜಿ.ಸಿ. ನಿಯಮಾವಳಿಗಳ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಸಭೆಯು ಅನುಮೋದನೆ ನೀಡಿತು.**

ಕುಲಪತಿಗಳು

ಕುಲಸಚಿವರು

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:

2. **ವಿಷಯ: 2023–24ನೇ ಸಾಲಿನ, ನಾಡಿನ ಸಾಧಕರಿಗೆ "ದುಬೈ ಇಂಡಿಯಾ ಇಂಟರ್ ನ್ಯಾಷಿನಲ್ ಅವಾರ್ಡ್ಸ್–2024" ಪ್ರದಾನ ಸಮಾರಂಭಕ್ಕೆ ಆಗಮಿಸುವಂತೆ ಕೋರಿರುವ ಬಗ್ಗೆ.**

**ಉಲ್ಲೇಖ:ಏಷ್ಯಾನೆಟ್ ಸುವರ್ಣ ನ್ಯೂಸ್ & ಕನ್ನಡ ಪ್ರಭ ರವರ ಪತ್ರ ದಿನಾಂಕ: 07–03–2024.**

– * –

ಕರ್ನಾಟಕದ ಪ್ರತಿಷ್ಠಿತ ಸುದ್ದಿವಾಹಿನಿ ಏಷ್ಯಾನೆಟ್ ಸುವರ್ಣನ್ಯೂಸ್ ಹಾಗೂ ದಿನಪತ್ರಿಕೆ ಕನ್ನಡಪ್ರಭ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ನಾಡಿನ ಉದ್ಯಮ ಕ್ಷೇತ್ರದಲ್ಲಿ ಪ್ರೊ. ಶರಣಪ್ಪ ವಿ. ಹಲಸೆ, ಉಪಕುಲಪತಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ರವರ ಸಾಧನೆಯನ್ನು ಗುರುತಿಸಿ "ದುಬೈ ಇಂಡಿಯಾ ಇಂಟರ್ ನ್ಯಾಷಿನಲ್ ಅವಾರ್ಡ್ಸ್–2024" ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಮಾರ್ಚ್ 28–2024, ರಂದು ದುಬೈನಲ್ಲಿ ನಡೆಯಲಿದೆ. ತಾವು ದಯವಿಟ್ಟು ಈ ಪುರಸ್ಕಾರವನ್ನು ಸ್ವೀಕರಿಸಲು ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಹಾಗೂ ಮಾರ್ಚ್ 27 ರಿಂದ ಮಾರ್ಚ್ 30 ರವರೆಗೆ ನಮ್ಮ ಅತಿಥಿ ಸತ್ಕಾರವನ್ನು ಸ್ವೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ. ನಿಮ್ಮ ಸೇವೆ ಸದಾಕಾಲ ನಮ್ಮ ರಾಜ್ಯಕ್ಕೆ ದೊರಕಲಿ, ನಿಮ್ಮ ಕೀರ್ತಿ ಗೌರವಗಳು ಹೀಗೆ ಎತ್ತರೆತ್ತರಕ್ಕೆ ಬೆಳೆಯುತ್ತಿರಲಿ ಎಂದು ಹಾರೈಸುತ್ತೇವೆ ಎಂದು ಅನಿಲ್ ಸುರೇಂದ್ರ, ಹಿರಿಯ ಉಪಾಧ್ಯಕ್ಷರು, ಏಷ್ಯಾನೆಟ್ ಸುವರ್ಣ ನ್ಯೂಸ್ & ಕನ್ನಡ ಪ್ರಭ ರವರು ಕಳುಹಿಸಿರುವ ಪತ್ರವನ್ನು ಸಭೆಯ ಗಮನಕ್ಕೆ ತಂದರು.

*****

ಮಾನ್ಯ ಕುಲಪತಿಗಳು ಮಾತನಾಡಿ **"ದುಬೈ ಇಂಡಿಯಾ ಇಂಟರ್ ನ್ಯಾಷಿನಲ್ ಅವಾರ್ಡ್ಸ್–2024"** ಪುರಸ್ಕಾರವನ್ನು ಸ್ವೀಕರಿಸಲು, **ಮಾರ್ಚ್ 27 ರಿಂದ ಮಾರ್ಚ್ 30 ರವರೆಗೆ** ಅತಿಥಿ ಸತ್ಕಾರವನ್ನು ಸ್ವೀಕರಿಸಲು, ಈ ಸಂಬಂಧ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಮಾರ್ಚ್ 28–2024 ರಂದು ದುಬೈನಲ್ಲಿ ನಡೆಯಲಿದ್ದು, ವಿಶ್ವವಿದ್ಯಾನಿಲಯದಿಂದ ಯಾವುದೇ ಹಣಕಾಸಿನ ಸೌಲಭ್ಯಗಳಿಲ್ಲದೆ ಈ ಕಾರ್ಯಕ್ರಮಕ್ಕೆ ತೆರಳಲು ಅನುಮತಿ ಕೋರಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಈ ರೀತಿಯ ಪುರಸ್ಕಾರವನ್ನು ಪಡೆಯುತ್ತಿರುವುದು ನಮ್ಮಗಳಿಗೆ ಹಾಗೂ ವಿಶ್ವವಿದ್ಯಾನಿಲಯಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇದೊಂದು ಹೆಮ್ಮೆಯ ವಿಷಯವಾಗಿದೆ. ಇಂತಹ ಕಾರ್ಯಕ್ರಮಕ್ಕೆ ಮಾನ್ಯ ಕುಲಪತಿಗಳು ಹೋಗಿ ಬರಲು ಎಲ್ಲಾ ಸದಸ್ಯರ ಒಮ್ಮತವಿರುತ್ತದೆ ಎಂದು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಮಾನ್ಯ ಕುಲಪತಿಗಳು "ದುಬೈ ಇಂಡಿಯಾ ಇಂಟರ್ ನ್ಯಾಷಿನಲ್ ಅವಾರ್ಡ್ಸ್–2024" ಪುರಸ್ಕಾರ ನೀಡಿ ಗೌರವಿಸಲಾಗುತ್ತಿದ್ದು, ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಮಾರ್ಚ್ 28–2024 ರಂದು ದುಬೈನಲ್ಲಿ ನಡೆಯಲಿದ್ದು, ಮಾರ್ಚ್ 27 ರಿಂದ ಮಾರ್ಚ್ 30 ರವರೆಗೆ ಮಾನ್ಯ ಕುಲಪತಿಗಳು ದುಬೈಗೆ ಹೋಗಿ ಅತಿಥಿ ಸತ್ಕಾರವನ್ನು ಸ್ವೀಕರಿಸಿ ಬರಲು ಹಾಗೂ ವಿಶ್ವವಿದ್ಯಾನಿಲಯದಿಂದ ಯಾವುದೇ ಹಣಕಾಸಿನ ಸೌಲಭ್ಯಗಳಿಲ್ಲದೆ ಈ ಕಾರ್ಯಕ್ರಮಕ್ಕೆ ತೆರಳಲು ಅನುಮತಿ ನೀಡಲಾಗಿದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ಕುಲಪತಿಗಳು

ಕುಲಸಚಿವರು

**3. ವಿಷಯ: ಶ್ರೀ. ನಾಗೇಶ .ಸಿ, ದ್ವಿತೀಯ ದರ್ಜೆ ಗುಮಾಸ್ತ ಆದ ಇವರನ್ನು ಕನ್ನಡ ಶೀಘ್ರಲಿಪಿಗಾರ ಹುದ್ದೆಗೆ ಬದಲಾವಣೆ ಮಾಡಿಕೊಡುವ ಬಗೆಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶ್ರೀ. ನಾಗೇಶ.ಸಿ, ಇವರು ದಿನಾಂಕ:01–07–1997 ರಲ್ಲಿ ಬೆರಳಚ್ಚುಗಾರ ಹಾಗೂ ಗುಮಾಸ್ತ ಹುದ್ದೆಗೆ ತಾತ್ಕಾಲಿಕ ನೌಕರರಾಗಿ (ಭಾವುಟ–ಅ) ನೇಮಕಗೊಂಡು 8 ವರ್ಷ 5 ತಿಂಗಳ ಕಾಲ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿ, (ಭಾವುಟ–ಆ) ನಂತರದ ದಿನಗಳಲ್ಲಿ ಇವರನ್ನು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಲ್ಲಿ ಖಾಯಂ ಮಾಡಿರುತ್ತದೆ.

ಸದರಿಯವರು, ನಿಯಮಾನುಸಾರ ಕನ್ನಡ ಶೀಘ್ರಲಿಪಿ, ಹಿರಿಯ ಶ್ರೇಣಿ (ಸೀನಿಯರ್ ಪರೀಕ್ಷೆಯಲ್ಲಿ) ಯನ್ನು 1989ರಲ್ಲಿ ಪೂರ್ಣಗೊಳಿಸಿ, (ಭಾವುಟ–ಇ) ನಂತರ 1993ರಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದಲ್ಲಿ ಶೀಘ್ರಲಿಪಿಗಾರ, ಡಾಟಾ ಎಂಟ್ರಿ ಅಪರೇಟರ್ ಮತ್ತು ಗುಮಾಸ್ತ ಹುದ್ದೆಯಲ್ಲಿ 4 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿ ದಾಖಲೆಗಳನ್ನು ಸಲ್ಲಿಸಿರುತ್ತಾರೆ. (ಭಾವುಟ–ಈ) ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾನ್ಯ ಅಧ್ಯಕ್ಷರ ಆಪ್ತ ವಲಯದಲ್ಲಿ ಶೀಘ್ರಲಿಪಿಗಾರರಾಗಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುವ (ಭಾವುಟ–ಉ) ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಮಾನ್ಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡ ಸರ್ಕಾರದ ನಿಯಮಾನುಸಾರ ಆದೇಶದೊಂದಿಗೆ ದಿನಾಂಕ: 03–01–2000ರಲ್ಲಿ ಕುಲಸಚಿವರಾಗಿ ಬಂದಂತಹ ಮಾನ್ಯ ಕೆ.ಎ.ಎಸ್ ಅಧಿಕಾರಿಗಳಾದ ಶ್ರೀ. ಹೆಚ್.ಎಸ್. ಅಶೋಕಾನಂದ್, ಶ್ರೀ. ವಿ.ರಾಮಣ್ಣ, ಪ್ರೊ. ಚಂಬಿಪುರಾಣಿಕ್, ಕುಲಸಚಿವರು (ಪ್ರಭಾರ) ಮತ್ತು ಶ್ರೀ.ಬಿ.ಕೆ. ದೀಕ್ಷಿತ್, ಐ.ಎಫ್.ಎಸ್ ಅಧಿಕಾರಿಗಳ ಆಪ್ತ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ, ಅಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದ್ದ ವ್ಯವಸ್ಥಾಪನಾ ಮಂಡಳಿ, ಹಣಕಾಸು ಸಮಿತಿ ಮತ್ತು ಶೈಕ್ಷಣಿಕ ಮಂಡಳಿ ಸಭೆ ಹಾಗೂ ಮತ್ತಿತರ ಸಭೆಗಳಿಗೆ ಹಾಜರಾಗಿ ನಡಾವಳಿಗಳನ್ನು ದಾಖಲಿಸಿಕೊಳ್ಳಲಾಗುತ್ತಿತ್ತು. (ಭಾವುಟ – ಊ – 22 ಪ್ರತಿಗಳು – 2001 ರಿಂದ 2013ರವರೆಗೆ) ಪ್ರತಿಗಳನ್ನು ಲಗತ್ತಿಸಲಾಗಿದೆ.

ಸದರಿಯವರು ವಿಶ್ವವಿದ್ಯಾನಿಲಯದಲ್ಲಿ ಸುಮಾರು 27 ವರ್ಷಗಳ ಕಾಲ ಕರ್ತವ್ಯ ನಿರ್ವಹಣೆ ಮಾಡಿ ವಯೋನಿವೃತ್ತಿ ಹಂತದಲ್ಲಿರುವುದರಿಂದ ಪ್ರಸ್ತುತ ಖಾಲಿ ಇರುವ ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಬದಲಾವಣೆ ಮಾಡಿ ಕೊಡಬೇಕೆಂದು ವಿನಯಪೂರ್ವಕವಾಗಿ ವಿನಂತಿಸಿಕೊಂಡಿರುವ ವಿಷಯವನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

*****

ಸದರಿ ವಿಷಯದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿ ಈ ನೌಕರರು ಎಷ್ಟು ವರ್ಷದಿಂದ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುತ್ತಾರೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸದರಿ ನೌಕರರು 1997 ರಿಂದ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದು, ಹೆಚ್ಚಿನ ಸಭೆಗಳಲ್ಲಿ ಶೀಘ್ರಲಿಪಿಗಾರರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುತ್ತಾರೆಂದು ಸಭೆಗೆ ವಿವರಿಸಿದರು.

ಮಾನ್ಯ ಸದಸ್ಯರುಗಳಾದ ಶ್ರೀ. ಕೆ. ಹರೀಶ್ ಗೌಡರು, ಶ್ರೀ. ಡಿ. ರವಿಶಂಕರ್ ಮತ್ತು ಶ್ರೀ.ಅಡಗೂರು ಹೆಚ್.ವಿಶ್ವನಾಥ್ ರವರು ಮಾತನಾಡಿ, ಇಷ್ಟು ವರ್ಷಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡಿರುವ ಇಂಥಹವರುಗಳಿಗೆ ಮೊದಲು ಆದ್ಯತೆ ನೀಡಬೇಕೆಂದು ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ನಾಗೇಶ .ಸಿ, ದ್ವಿತೀಯ ದರ್ಜೆ ಗುಮಾಸ್ತ, ಇವರು ಈಗಾಗಲೇ ಕನ್ನಡ ಶೀಘ್ರಲಿಪಿಗಾರರಾಗಿ ಹೆಚ್ಚಿನ ಅನುಭವ ಹೊಂದಿರುವುದರಿಂದ ಇವರನ್ನು ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಬದಲಾವಣೆ ಮಾಡಿ ಆಡಳಿತಾತ್ಮಕವಾಗಿ ಎಲ್ಲಾ ಸೌಲಭ್ಯಗಳನ್ನು ನೀಡಲು ಸಭೆಯು ತೀರ್ಮಾನಿಸಿತು.**

#####

**ಕುಲಪತಿಗಳು** **ಕುಲಸಚಿವರು**

**4. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿ (Gradation List) ಹಾಗೂ ವೆಕೆನ್ಸಿ ರಿಜಿಸ್ಟರ್ (Vacancy Registar) ಸಿದ್ಧಪಡಿಸುವ ಸಂಬಂಧ ದಿನಾಂಕ: 05-03-2024ರ ಅಪರಾಹ್ನ 3.00 ಗಂಟೆಗೆ ಜರುಗಿದ ಸಮಿತಿ ಸಭೆಯ ನಡಾವಳಿ ಬಗ್ಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿ (Gradation List) ಸಿದ್ಧಪಡಿಸುವ ಸಂಬಂಧವಾಗಿ (1) ಪ್ರೊ. ಕೆ.ಎಲ್.ಎನ್ ಮೂರ್ತಿ, ಕುಲಸಚಿವರು. (2) ಪ್ರೊ. ಎನ್ ಲಕ್ಷ್ಮಿ, ಡೀನ್(ಶೈಕ್ಷಣಿಕ) (3) ಶ್ರೀ. ಚಂದೇಶ್, ಎಸ್.ಎನ್, ಉಪಕುಲಸಚಿವರು (ಆಡಳಿತ) ಈ ಮೂವರು ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿ, ತೀರ್ಮಾನಿಸುವುದು ಸೂಕ್ತವೆಂದು ತಿಳಿಸಿರುವ ಹಿನ್ನಲೆಯಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಕರಾಮುವಿ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿ (Gradation List) ಬಗ್ಗೆ ಚರ್ಚಿಸಿ, ಸದರಿ ಅಧಿಕಾರಿಗಳು ನೀಡಿರುವ ಸೂಕ್ತ ಮಾರ್ಗದರ್ಶನ ಹಾಗೂ ಸಲಹೆಯ ಅನುಸಾರವಾಗಿ ಕರಡು ಜೇಷ್ಠತಾ ಪಟ್ಟಿ ಸಿದ್ದಪಡಿಸಲಾಗಿದೆ ಎಂದು ಮಾನ್ಯ ಕುಲಸಚಿವರು ತಿಳಿಸಿದರು.

<u>ತೀರ್ಮಾನ:</u>

- **ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರ ಕರಡು ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಲಾಗಿದ್ದು, ಮುಂದಿನ ಹಂತದಲ್ಲಿ ನ್ಯೂನತೆಗಳೇನಾದರೂ ಬಂದರೆ ಸದರಿ ನ್ಯೂನತೆಗಳನ್ನು ಸರಿಪಡಿಸಿಕೊಂಡು ಪರಿಷ್ಕರಿಸಿ ಕರಡು ಜೇಷ್ಠತಾ ಪಟ್ಟಿಯನ್ನು ವ್ಯವಸ್ಥಾಪನಾ ಮಂಡಳಿಯ ಸಭೆಗೆ ಮಂಡಿಸಿ ಅನುಮೋದನೆ ಪಡೆದು ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಬೋಧಕೇತರ ನೌಕರರಿಂದ ಆಕ್ಷೇಪಣೆಗಳು ಸಲ್ಲಿಕೆಯಾದಲ್ಲಿ ಪರಿಶೀಲಿಸಿ ನ್ಯೂನತೆಗಳನ್ನು ಸರಿಪಡಿಸಿ ಅಂತಿಮವಾಗಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿಬಹುದಾಗಿದೆ ಎಂದು ಶಿಫಾರಸ್ಸು ಮಾಡಲಾಯಿತು.**
- **ಬೋಧಕೇತರ ನೌಕರರ ಕರಡು ಜೇಷ್ಠತಾ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕುಲಸಚಿವರಿಗೆ ಸಲ್ಲಿಸಲಾಯಿತು.**

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

*****

ಕರಾಮುವಿಯ ಬೋಧಕೇತರ ನೌಕರರ ಕರಡು ಜೇಷ್ಠತಾ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕುಲಸಚಿವರು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ತೆರೆದು ಮೇಲ್ಕಂಡ ವಿವರಗಳನ್ನು ಸದಸ್ಯರಿಗೆ ವಿವರಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2019ರ ನಂತರ ಪದೋನ್ನತಿ ಹೊಂದಿದ ನೌಕರರು, 2019ರ ನಂತರದಲ್ಲಿ ಅನುಕಂಪದ ಆಧಾರದ ಮೇಲೆ ಸೇವೆಗೆ ಸೇರಿರುವ ನೌಕರರು ಹಾಗೂ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಮಂಜೂರಾಗಿ ನೇರ ನೇಮಕಾತಿಗೆ ಖಾಲಿ ಇರುವ ಸಮಾನ ಖಾಯಂ ಹುದ್ದೆಗಳಲ್ಲಿ ವಿಲೀನಗೊಳಿಸಿರುವ ನೌಕರರನ್ನೊಳಗೊಂಡಂತೆ ಕರಾಮುವಿಯ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿ (Gradation List)ಯನ್ನು ಸಿದ್ಧಪಡಿಸುವ ಸಂಬಂಧ ಸಮಿತಿಯಲ್ಲಿ ಕೈಗೊಂಡ ತೀರ್ಮಾನದ ರೀತ್ಯಾ ಮುಂದುವರಿಯಲು ಹಾಗೂ ವಿಶ್ವವಿದ್ಯಾನಿಲಯದ ನಿಯಮಾವಳಿಗಳ ರೀತಿ ಅನುಷ್ಠಾನಗೊಳಿಸಲು ಸಭೆಯು ಅನುಮೋದನೆ ನೀಡಿತು.**

#####

**ಕುಲಪತಿಗಳು** **ಕುಲಸಚಿವರು**

5. **ವಿಷಯ: ವಿಶ್ವವಿದ್ಯಾನಿಲಯದಲ್ಲಿ ಮೂಲ ವೇತನದಲ್ಲಿ ರೂ.10/– ಕಡಿತಗೊಳಿಸಿ ಹಾಗೂ ಕಾಲಕಾಲಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ, ನಗರ ಪರಿಹಾರ ಭತ್ಯೆ, ಇತ್ಯಾದಿಗಳನ್ನು ಪಡೆಯುತ್ತಿರುವ, ಹಲವಾರು ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ ಸೇವೆ ಸಲ್ಲಿಸುತ್ತಿರುವ 08 ಮಂದಿ ನೌಕರರನ್ನು ಖಾಯಂಗೊಳಿಸುವ ಕುರಿತು.**

– * –

ನೌಕರರ ವಿವರ ಈ ಕೆಳಕಂಡಂತಿದೆ

| ಕ್ರ.ಸಂಖ್ಯೆ | ಹೆಸರು | | ಹುದ್ದೆ | | ಕಾ.ವೇ.ಶ್ರೇ ಸೇವಾ ಅವಧಿ |
|---|---|---|---|---|---|
| 1. | ಕೆ.ಬಿ. ಧೀರಜ್ | – | ಡಾಟಾ ಎಂಟ್ರಿ ಅಪರೇಟರ್ | – | 10 ವರ್ಷಗಳು |
| 2. | ಎಂ.ಜೆ. ವೆಂಕಟೇಶ್ ರಾವ್ | – | ವಾಹನ ಚಾಲಕ | – | 10 ವರ್ಷಗಳು |
| 3. | ಎಸ್. ನಾಗರಾಜು | – | ಪರಿಚಾರಕ | – | 10 ವರ್ಷಗಳು |
| 4. | ಎಸ್. ಪರಶಿವಮೂರ್ತಿ | – | ಡಾಟಾ ಎಂಟ್ರಿ ಅಪರೇಟರ್ | – | 05 ವರ್ಷಗಳು |
| 5. | ಆರ್. ಸೋಮಸುಂದರ್ | – | ಪರಿಚಾರಕ | – | 05 ವರ್ಷಗಳು |
| 6 | ಭಾಸ್ಕರ್ | – | ವಾಹನ ಚಾಲಕ | – | 05 ವರ್ಷಗಳು |
| 7. | ಆರ್. ಮಂಜುನಾಥ್ | – | ದ್ವಿತೀಯ ದರ್ಜೆ ಗುಮಾಸ್ತ | – | 05 ವರ್ಷಗಳು |
| 8. | ಬಿ. ನಾಗೇಶ್ ಬಾಬು | – | ವಾಹನ ಚಾಲಕ | – | 05 ವರ್ಷಗಳು |

ಈ ಮೇಲ್ಕಂಡ ನೌಕರರುಗಳು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಖಾಲಿಯಿರುವ ವಿವಿಧ ವೃಂದದ ಹುದ್ದೆಗಳಿಗೆ ಎದುರಾಗಿ 2013 ರಿಂದ ಅನ್ವಯವಾಗುವಂತೆ ಖಾಯಂಗೊಳಿಸಿ ನಮ್ಮ ಮತ್ತು ಕುಟುಂಬ ವರ್ಗದವರಿಗೆ ಜೀವನಾಧಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು.

*****

ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಉಮಾ .ಕೆ, ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ (ವೆಚ್ಚಗಳು) ರವರು ಮಾತನಾಡಿ ಹಿಂದಿನ ದಾಖಲಾತಿಯನ್ನು ಸಲ್ಲಿಸಿದ ನಂತರ ಇದರ ಸಾಧಕ – ಬಾಧಕಗಳ ಬಗ್ಗೆ ಪರಿಶೀಲಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸದರಿ ವಿವರಗಳನ್ನು ತಮಗೆ ಕಳುಹಿಸಲಾಗುವುದೆಂದು ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯವನ್ನು ಮುಂದೂಡಲಾಯಿತು.**

#####

**ಮಾನ್ಯ ಶ್ರೀ. ಡಿ. ರವಿಶಂಕರ್, ವ್ಯವಸ್ಥಾಪನಾ ಮಂಡಳಿ ಸದಸ್ಯರು ಸಭೆಯಲ್ಲಿ ಚರ್ಚಿಸಲು ಮಂಡಿಸಿದ ವಿಷಯ.**

1. **ವಿಷಯ: ಹುದ್ದೆ ಬದಲಾಯಿಸಿ ಕೊಡುವಂತೆ ಕೋರಿ.**

– * –

**ಪ್ರಭಾಕರ .ಡಿ.ಎಸ್, ಪರಿಚಾರಕ ಮತ್ತು ನಾಗರಾಜು .ಎಸ್, ಪರಿಚಾರಕ (ಕಾಲಿಕ ವೇತನ ಶ್ರೇಣಿ) ಹಾಗೂ ಇವರುಗಳು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಬದಲಾಯಿಸಿ ಕೊಡುವಂತೆ ಹಾಗೂ ದಿವಾಕರ ಎಮ್.ವಿ, ಪರಿಚಾರಕ, ತಾತ್ಕಾಲಿಕ ನೌಕರರು ಇವರು ಡಿ.ಇ.ಓ ಅಥವಾ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಬದಲಾಯಿಸಿಕೊಡುವಂತೆ ಕೋರಿ ಮನವಿಗಳನ್ನು ಸಲ್ಲಿಸಿರುತ್ತಾರೆಂದು ತಿಳಿಸಿದರು.**

– * –

ಕುಲಪತಿಗಳು ಕುಲಸಚಿವರು

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಅರ್ಜಿಗಳ ಪರಿಶೀಲಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈ ವಿಷಯದ ಬಗ್ಗೆ ಮುಂದಿನ ಕ್ರಮವಹಿಸಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲಾಗಿದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**2. ವಿಷಯ: ವಿಶ್ವವಿದ್ಯಾನಿಲಯದಲ್ಲಿ ನೌಕರರುಗಳ ಜೇಷ್ಠತಾ ಪಟ್ಟಿಯ ಜೊತೆಗೆ SDC ಪದೋನ್ನತಿ ನೀಡುವ ಬಗ್ಗೆ. (177ನೇ BOM ಸಭೆಗೆ ವಿಷಯ ಮಂಡಿಸುವ ಬಗ್ಗೆ)**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸುಮಾರು 10 ರಿಂದ 12 ವರ್ಷಗಳಿಂದ ಪರಿಚಾರಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಮ್ಮಲ್ಲಿ ಹಲವು ಸಿಬ್ಬಂದಿಗಳು ಖಾಲಿ ಇರುವ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆಯನ್ನು ಹೊಂದಿರುತ್ತೇವೆ. ಮುಂದುವರೆದು, ನಮ್ಮಲ್ಲಿ ಹಲವರು ನೌಕರರು ಈಗಾಗಲೇ 50 ರಿಂದ 55 ವರ್ಷ ವಯೋಮಿತಿ ದಾಟಿರುವವರಿದ್ದು, ಇನ್ನು ಕೆಲವೇ ವರ್ಷಗಳಲ್ಲಿ ನಿವೃತ್ತಿಯನ್ನು ಹೊಂದುವುದರಿಂದ ದಯಮಾಡಿ ತಾವುಗಳು 175ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ ಸಿದ್ಧಪಡಿಸಿರುವ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯ ಜೊತೆಗೆ ಹಾಗೂ ಖಾಲಿ ಇರುವ **(SDC)** ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳಿಗೆ ಪದೋನ್ನತಿ ನೀಡುವಂತೆ ಮಾನ್ಯ ಕುಲಪತಿಗಳಿಗೆ ಹಾಗೂ ಮಾನ್ಯ ಕುಲಸಚಿವರಿಗೆ ನಿರ್ದೇಶನ ನೀಡಬೇಕಾಗಿ ತಮ್ಮಲ್ಲಿ ಕೋರಿಕೊಳ್ಳುತ್ತೇವೆ ಎಂದು ಏಳು ನೌಕರರುಗಳ ಸಹಿ ಇರುವ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

*****

ಈ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ ಹಲವು ವರ್ಷಗಳ ಕಾಲ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸದೇ ಇರುವುದು ಎಲ್ಲಾ ನೌಕರರಿಗೂ ತಿಳಿದಿರುವ ವಿಷಯವಾಗಿದೆ. ಅವುಗಳನ್ನು ಸಿದ್ದಪಡಿಸಿ, ಅಂತಿಮಗೊಳಿಸಿದ ನಂತರ ಮುಂದಿನ ಕ್ರಮವಹಿಸಬಹುದಾಗಿರುತ್ತದೆಂದು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿಯು ಅಂತಿಮಗೊಂಡ ನಂತರ ಈ ಬಗ್ಗೆ ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಕುಲಪತಿಗಳು** **ಕುಲಸಚಿವರು**